ಪಿ ಡಬ್ಲ್ಯೂ: 1

ದಿನಾಂಕ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ಪ್ರತಿವಾದಿಯು ನನ್ನ ತಾಯಿಯ ತಮ್ಮನಾಗಬೇಕು. ಹನುಮಂತಪ್ಪ ನನ್ನ ಅಜ್ಜ ಆಗಿದ್ದು ಆತನಿಗೆ ಒಟ್ಟು 6 ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ನನ್ನ ತಾಯಿ ರೇಣುಕಾ, ಅಂಜವ್ವ, ಪಾರ್ವತಿ, ಸಾವಿತ್ರ ಉರ್ಫ್ ನೂರಜಾನ್, ಮಾಲತೇಶ ಹಾಗೂ ಯಲ್ಲಪ್ಪ ಇರುತ್ತಾರೆ. ನನ್ನ ವಿವಾಹ ಆಗಿ 3 ವರ್ಷಗಳಾಗಿರುತ್ತದೆ. ಸದರಿ ವಿವಾಹದ ಪೂರ್ವದಲ್ಲಿ ನನ್ನನ್ನು ಸೋದರ ಮಾವ ಯಲ್ಲಪ್ಪನಿಗೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕುರಿತು ದಾಖಲೆಗಳು ಸಹ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಾಯಿ 2003 ರಲ್ಲಿ ಖರೀದಿ ಹಿಡಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಾನು ನನ್ನ ತಂದೆಯನ್ನು ನೋಡಿರುವುದಿಲ್ಲ. ನನಗೆ ಪ್ರತಿವಾದ ಪತ್ರದಲ್ಲಿ ತೋರಿಸಿರುವಂತೆ ಇಬ್ಬರು ಸಹೋದರರು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಕಲ್ಯಾಣಪ್ಪ ಎಂದರೆ ಸರಿಯಲ್ಲ. ಸಾಕ್ಷಿಯು ಹನುಮಂತಪ್ಪ ನನ್ನ ತಂದೆ ಯಾಗಿರುವುದಾಗಿ ನುಡಿಯುತ್ತಾರೆ. ನನ್ನ ತಾಯಿಯ ತವರು ಮನೆ ಕಜ್ಜರಿ ಗ್ರಾಮ ಆಗಿರುತ್ತದೆ.

2. ನನ್ನ ತಾಯಿಯನ್ನು ರಾಣೇಬೆನ್ನೂರಿನ ವ್ಯಕ್ತಿಗೆ ವಿವಾಹ ಮಾಡಿಕೊಟ್ಟಿರುವುದಾಗಿ ತಿಳಿಸಿದ್ದು, ಯಾವ ಮನೆತನಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಕಜ್ಜರಿ ಗ್ರಾಮದ ಸರ್ವೆ ನಂ.182/1 ರ ಪಹಣಿಯನ್ನು ತೋರಿಸಿ ಸಾಕ್ಷಿಗೆ ತನ್ನ ತಾಯಿಯ ಹೆಸರಿನಲ್ಲಿರುವುದಾಗಿ ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಸದರಿ ಪಹಣಿಯಲ್ಲಿ ನನ್ನ ತಾಯಿಯ ಗಂಡನ ಹೆಸರು ಕಲ್ಯಾಣಪ್ಪ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನನ್ನ ಅಜ್ಜ ಮರಣದ ನಂತರ ಜಂಟಿ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಮರಣದ ನಂತರ ಆತನ ವಂಶಾವಳಿ ಪ್ರಮಾಣ ಪತ್ರದಂತೆ ವರ್ಗಾವಣೆಯಾಗುತ್ತದೆ ಎಂದರೆ ಸರಿ.

3. ದಾವಾ ಆಸ್ತಿಯಲ್ಲಿ ಎರಡು ಮನೆಗಳು ಇವೆ ಎಂದರೆ ಸಾಕ್ಷಿಯು ಒಂದೇ ಮನೆ ಇರುವುದಾಗಿ ನುಡಿಯುತ್ತಾರೆ. ವಾದಪತ್ರದ ಜೊತೆ ತೋರಿಸಿರುವ ಹಾತ್ ನಕಾಶೆಯಲ್ಲಿ ಎರಡು ಮನೆ ಇರುವುದಾಗಿ ತೋರಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ಮನೆಯಲ್ಲಿ ವಿಭಾಗ ಮಾಡಿ ಒಂದು ಭಾಗವನ್ನು ಬಾಡಿಗೆಗೆ ನೀಡಿರುವುದಾಗಿ ನುಡಿಯುತ್ತಾರೆ. ಸದರಿ ಹಾತ್ ನಕಾಶೆಯು ಸತ್ಯದಿಂದ ಕೂಡಿರುತ್ತದೆ. ವಾದಪತ್ರ ಮತ್ತು ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಿನಾಂಕ 15-11-2022 ರಂದು ದಾವಾ ಆಸ್ತಿಯು

ಪ್ರತಿವಾದಿಯ ಹೆಸರಿನಲ್ಲಿರುವುದಾಗಿ ತಿಳಿದು ಬಂದಿರುತ್ತದೆ. 2021 ನೇ ಸಾಲಿನಲ್ಲಿ ಪ್ರತಿವಾದಿಗೆ ನನ್ನ ತಾಯಿ ವಕೀಲರ ಮೂಲಕ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟೀಸ್ ನಲ್ಲಿ ದಾವಾ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿದ್ದು ಬಿಟ್ಟುಕೊಡುವಂತೆ ಕೇಳಿದ್ದೆವು ಎಂದರೆ ಸರಿ. ಸದರಿ ನೋಟೀಸ್ ಗೆ ಮಾಹಿತಿ ನೀಡುವ ಸಮಯದಲ್ಲಿ ನನಗೆ ಗೊತ್ತಿತ್ತು ಎಂದರೆ ಸರಿ. ನನಗೆ ಸದರಿ ವಿಷಯ ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ತಿಳಿದಿರುತ್ತದೆ. ಕಳೆದ 3 ವರ್ಷಗಳಿಂದ ನನ್ನ ತಾಯಿ ಅನಾರೋಗ್ಯದಿಂದ ಇರುತ್ತಾರೆ. ನನ್ನ ತಾಯಿ ಅಕ್ಟೋಬರ್ 2022 ರಲ್ಲಿ ಮರಣ ಹೊಂದಿರುತ್ತಾರೆ.

4. 2007 ನೇ ಸಾಲಿನಲ್ಲಿ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ನನ್ನ ತಾಯಿ ಅರ್ಧ ಹಿಸ್ಸಾ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಒಪ್ಪಿಗೆ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ಖೊಟ್ಟಿ ದಾಖಲೆಯಾಗಿರುವುದಾಗಿ ನುಡಿಯುತ್ತಾರೆ. ಸದರಿ ದಾಖಲೆಯನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಯ ಮರಣದ ತನಕ ಯಾರೂ ತಕರಾರು ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಅರ್ಧ ಆಸ್ತಿಯಲ್ಲಿ ಪ್ರತಿವಾದಿ ವಾಸವಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಜೋಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮನೆ ಕೆಲಸ ಮಾಡಿಕೊಂಡಿದ್ದರು. ಆಕೆ ಮತ್ತು ಪ್ರತಿವಾದಿಗಳು ಜಂಟಿ ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮೂರನೇ ಮಗು ಜನಿಸುವ ತನಕ ಗಂಡನ ಮನೆಯಲ್ಲಿದ್ದು ನಂತರ ತಾಯಿಯ ಮನೆಗೆ ಬಂದಿರುತ್ತಾಳೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.